ಬ್ರಹ್ಮಾವರದಲ್ಲಿ ಕೃಷಿ ಸಂಶೋಧನಾ ಕೇಂದ್ರ

324 (1755): ಶ್ರೀ ಬಸವರಾಜು (ಬ್ರಹ್ಮಾವರ):-

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಉಡುಪಿ ತಾಲ್ಲೂಕು ಬ್ರಹ್ಮಾವರದಲ್ಲಿರುವ ಕೃಷಿ ಸಂಶೋಧನಾ ಕೇಂದ್ರವನ್ನು ಯಾವ ವರ್ಷದಲ್ಲಿ ಪ್ರಾರಂಭಿಸಲಾಯಿತು, ಹಾಗೂ ಅದಕ್ಕೆ ನಿರ್ವಹಿಸಲ್ಪಟ್ಟ ಕಾರ್ಯ ವ್ಯಾಪ್ತಿಗಳೇನು;

ಆ. ಕೃಷಿ ಸಂಶೋಧನಾ ಕೇಂದ್ರಕ್ಕೆ ಮಂಜೂರು ಮಾಡಿ ವಶಕ್ಕೆ ಕೊಟ್ಟ ಭೂಮಿಯ ವಿಸ್ತೀರ್ಣವೆಷ್ಟು ಹಾಗೂ ಆ ಎಲ್ಲಾ ಭೂಮಿಯನ್ನು ಸಂಶೋಧನಾ ಕಾರ್ಯಗಳಿಗಾಗಿ ಬಳಕೆ ಮಾಡಲಾಗುತ್ತಿದೆಯೇ;

ಇ. ಮಾಡಲಾಗುತ್ತಿಲ್ಲವಾದಲ್ಲಿ ಬಳಕೆ ಮಾಡದೇ ಬಿಟ್ಟ ಭೂಮಿಯ ವಿಸ್ತೀರ್ಣವೆಷ್ಟು ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಸಚಿವರು):-

ಅ. ವಿಶ್ವಬ್ಯಾಂಕ್ ನೆರವಿನ ರಾಷ್ಟ್ರೀಯ ಕೃಷಿ ಸಂಶೋಧನಾ ಯೋಜನೆಯ ಅಡಿಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ 1932ರಲ್ಲಿ ಬ್ರಹ್ಮಾವರ ಪ್ರಾದೇಶಿಕ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆಯ ಇಡೀ ಕರಾಳೆಯ ನಿರ್ದಿಷ್ಟ ತೊಂದರೆಗಳನ್ನು ಗುರುತಿಸಿ, ಅವುಗಳ ನಿವಾರಣೆಗೆ ಹಾಗೂ ಎತ್ತರದ ಪ್ರದೇಶಗಳ ಹವಾಗುಣದಲ್ಲಿ ಭತ್ತದ ಬೆಳೆ, ದ್ವಿದಳ ಧಾನ್ಯಗಳು, ಎಣ್ಣೆ ಕಾಳುಗಳು, ಗೋಡಂಬಿ ಬೆಳೆ ಸೇರಿದಂತೆ ತೋಟಗಾರಿಕೆ ಬೆಳೆಗಳು, ಕಬ್ಬು ಮತ್ತು ಒಳನಾಡು ಮೀನುಗಾರಿಕೆಯಲ್ಲಿ ಸಂಶೋಧನಾ ಕಾರ್ಯಗಳನ್ನು ಈ ಸಂಶೋಧನಾ ಕೇಂದ್ರವಲ್ಲಿ ತೆಗೆದುಕೊಳ್ಳಲು ಉದ್ದೇಶಿಸಲಾಗಿದೆ.

ಆ. ಒಟ್ಟು ಪ್ರದೇಶ 108.11 ಹೆಕ್ಟೇರ್‌ಗಳು, ಈ ಎಲ್ಲಾ ಭೂಮಿಯನ್ನು ಸಂಶೋಧನಾ ಕಾರ್ಯಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿದೆ.

ಇ. ಉದ್ಭವಿಸುವುದಿಲ್ಲ.

ಶ್ರೀ ಬಸವರಾಜ್:- ಇಬ್ಬರ ಹೆಸರೂ ಒಂದೇ ಆಗಿರುವುದರಿಂದ ಕನ್‌ಫ್ಯೂಷನ್ ಆಗಿದೆ. ನನ್ನ ಬ್ರಹ್ಮಾವರ ಕ್ಷೇತ್ರದಲ್ಲಿ 1982ರಲ್ಲಿ ಬ್ರಹ್ಮಾವರ ಪ್ರಾದೇಶಿಕ ಸಂಶೋಧನಾ ಕೇಂದ್ರವನ್ನು ಸ್ಥಾಪನೆ ಮಾಡಲಾಯಿತು. ಉದ್ದೇಶ, ಕರಾವಳಿ ಜಿಲ್ಲೆಯ ರೈತರಿಗೆ ಅಲ್ಲಿ ಬೆಳೆಯುವ ಭತ್ತದ ಬೆಳೆ, ದ್ವಿದಳ ಧಾನ್ಯ, ಎಣ್ಣೆ ಕಾಳು, ಗೋಡಂಬಿ, ಕಬ್ಬು ಇನ್ನಿತರ ಬೆಳೆಗಳ ವಿಷಯದಲ್ಲಿ ಉಪಯೋಗವಾಗಲಿ, ಹವಾಮಾನದಲ್ಲಿ ಗುಣಮಟ್ಟದಲ್ಲಿ ಉತ್ತಮವಾಗಲಿ ಎಂಬ ದೃಷ್ಟಿಯಿಂದ ಈ ಒಂದು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಯಿತು. ಅದು ಪ್ರಾರಂಭವಾಗಿ 11 ವರ್ಷವಾದರೂ ಅದರ ಪ್ರಯೋಜನ ರೈತರಿಗೆ ಎಷ್ಟು ಸಿಕ್ಕಿದೆ ಎಂಬುದನ್ನು ಸಚಿವರಲ್ಲಿ ಕೇಳಬಯಸುತ್ತೇನೆ. ಯಾವ ಯಾವ ಬೆಳೆಗಳ ವಿಷಯದಲ್ಲಿ ಸಂಶೋಧನೆ ಮಾಡಿ ರೈತರಿಗೆ ಪ್ರಯೋಜನ ಕೊಟ್ಟಿದ್ದಾರೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ:- ಸಂಶೋಧನಾ ಕೇಂದ್ರವನ್ನು ಸ್ಥಾಪನೆ ಮಾಡಿ 108.11 ಹೆಕ್ಟೇರ್ ಭೂಮಿಯನ್ನು ಸಂಶೋಧನಾ ಕೇಂದ್ರಕ್ಕೆ ಕೊಟ್ಟಿದ್ದೇವೆ. ಅಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವು ಬೆಳೆಗಳನ್ನು ಬೆಳೆಯುವುದಕ್ಕಾಗಲಿ ಇನ್ನು ಏನದಾರೂ ಪರಿಶೋಧನೆ ನಡೆಸಿ ಆ ಪ್ರಾಂತ್ಯಗಳಲ್ಲಿ ಹೆಚ್ಚು ಬೆಳೆಗಳು ಸರಿಯಾದ ರೀತಿಯಲ್ಲಿ ಬೆಳೆಯದೆ ಇರುವುದರಿಂದ ಆ ಬೆಳೆಗಳು ಈ ಸ್ಥಳಕ್ಕೆ ಹವಾಮಾನಕ್ಕೆ

ಹೊಂದಿಕೊಳ್ಳುತ್ತವೆಯೇ ಎಂದು ತಿಳಿದು ರೈತರಿಗೆ ತಿಳಿವಳಿಕೆ ನೀಡಬೇಕೆಂದು ಈ ಕೇಂದ್ರವನ್ನು ಸ್ಥಾಪನೆ ಮಾಡಿದ್ದೇವೆ. ಸ್ಥಾಪನೆ ಮಾಡಿದ ಮೇಲೆ, 108.11 ಹೆಕ್ಟೇರ್ ಭೂಮಿ ಪೈಕಿ ಮಳೆ ಆಧಾರಿತ ಪ್ರದೇಶ 46 ಹೆಕ್ಟೇರ್, ನೀರಾವರಿ ಪ್ರದೇಶ 4 ಹೆಕ್ಟೇರ್ ಮತ್ತು 10 ಹೆಕ್ಟೇರ್ ಭೂಮಿ ಅರಣ್ಯಕ್ಕೆ 9.13 ಹೆಕ್ಟೇರ್ ರಸ್ತೆ ಮತ್ತು ಕಟ್ಟಡ ನಿರ್ಮಾಣಕ್ಕೆ ಹೋಗಿ ಕೇವಲ 32.66 ಹೆಕ್ಟೇರ್ ಭೂಮಿ ಮಾತ್ರ ಪರಿಶೋಧನೆಗೆ ಸಿಕ್ಕಿ ಅದರ ಮೇಲೆ ಪರಿಶೋಧನೆ ನಡೆಸುತ್ತಿದ್ದಾರೆ. ಈಗಾಗಲೇ ಕೆಲವು ವರ್ಷಗಳಿಂದ ಇತ್ಯರ್ಥವಾದ ಪ್ರದೇಶದಲ್ಲಿ ಭತ್ತ ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇನ್ನೂ ಕೆಲವಾರು ಬೆಳೆಗಳನ್ನು ಬೆಳೆದು ಈ ಪ್ರದೇಶದಲ್ಲಿ ಇಡೀ ಸಮುದ್ರದ ದಡದಲ್ಲಿ ಇರತಕ್ಕ ಪ್ರದೇಶಗಳಿಗೆ ಇದರ ಪ್ರಯೋಜನ ಆಗುವುದೆಂದು ಇಲ್ಲಿ ಸಂಶೋಧನೆ ನಡೆಯುತ್ತಿದೆ.

ಶ್ರೀ ಬಸವರಾಜ್:– ಮಾನ್ಯ ಸಚಿವರು ಹೇಳಿದ ಹಾಗೆ 108.11 ಹೆಕ್ಟೇರ್ ಭೂಮಿಯನ್ನು ಈ ಕೃಷಿ ಸಂಶೋಧನಾ ಕೇಂದ್ರಕ್ಕೆ ಕೊಟ್ಟಿದೆ. ಅದರಲ್ಲಿ ಅವರೇ ಹೇಳಿದ ಹಾಗೆ 30 ಹೆಕ್ಟೇರ್ ಮಾತ್ರ ಉಪಯೋಗವಾಗುತ್ತಿದೆ. ಅವರ ಉತ್ತರದಲ್ಲಿ ಎಲ್ಲಾ ಪ್ರದೇಶವನ್ನೂ ಕಾರ್ಯಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ. ಆದರೆ ಈಗ ಉತ್ತರ ಕೊಟ್ಟಿದ್ದಾರೆ ಕೇವಲ 30 ಹೆಕ್ಟೇರ್ ಎಂದು.

ಉಳಿದ ಭೂಮಿಯನ್ನು ಯಾವ ಕೆಲಸಕ್ಕೂ ಉಪಯೋಗಿಸುತ್ತಿಲ್ಲ. ಖಾಲಿ ಹಾಗೆಯೇ ಇದೆ. ಎಷ್ಟು ಜಾಗವನ್ನು ಉಪಯೋಗಿಸುತ್ತಿದ್ದೀರಿ ಎಂಬುದೇ ನನ್ನ ಪ್ರಶ್ನೆ. ಇದಕ್ಕೆ ಕಾರಣ ಇದೆ. ಅಲ್ಲಿ ಸಂಶೋಧನೆ ಮಾಡುವವರಿಗೆ ಪೋಸ್ಟಿಂಗ್ಸ್ ಅರ್ಧದಷ್ಟೂ ಆಗಿಲ್ಲ. ಎಷ್ಟು ಜನ ಸಂಶೋಧನೆ ಮಾಡಬೇಕೋ ಅಷ್ಟು ಜನರನ್ನು ನೇಮಕ ಮಾಡದೇ ಇರುವುದರಿಂದ ಕೊಟ್ಟ ಭೂಮಿ ಉಪಯೋಗ ಆ ಕೇಂದ್ರದಲ್ಲಿ ಆಗುತ್ತಾ ಇಲ್ಲ. ತನ್ಮೂಲಕ ಉಪಯೋಗ ರೈತರಿಗೆ ಆಗುತ್ತಾ ಇಲ್ಲ ಎಂಬುದನ್ನು ಈ ಸದನದಲ್ಲಿ ಹೇಳಿ ಆದಷ್ಟು ಬೇಗ ಎಲ್ಲ ಸಂಶೋಧನಾ ಇಲಾಖೆಯ ಪೋಸ್ಟಿಂಗ್ಸನ್ನು ಫಿಲಪ್ ಮಾಡಬೇಕೆಂದು ಹೇಳುತ್ತೇನೆ. ಮತ್ತೆ ಖಾಲಿ ಗುಡ್ಡ ಬೆಟ್ಟ ಇದೆ ಎಂದು ಹೇಳಿದ್ದಾರೆ. ಅದು ಖಾಲಿ ಇದೆ. ಖಾಲಿ ಇರುವ ಜಾಗವನ್ನು ಸರ್ಕಾರ ಇಟ್ಟುಕೊಂಡು ಬೇರೆ ಕೃಷಿ ಕಾರ್ಯ ಮಾಡುವುದಾದರೆ ಅದನ್ನು ಉಪಯೋಗಿಸಬೇಕೆಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ:– ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಲ್ಲಿರತಕ್ಕ ಭೂಮಿ ಪೈಕಿ ಯಾವ ಯಾವುದಕ್ಕೆ ಎಷ್ಟೆಷ್ಟು ಭೂಮಿ ಉಪಯೋಗಿಸಿದ್ದೇವೆ ಎನ್ನುವುದನ್ನು ಉತ್ತರದಲ್ಲಿ ಹೇಳಿದ್ದೇನೆ. ಆದರೆ ಅಲ್ಲಿ ಉಳಿದಿರತಕ್ಕ 32.68 ಹೆಕ್ಟೇರ್‌ನಲ್ಲಿ ಕೂಡಾ ಯಾವ ಬೆಳೆ ಚೆನ್ನಾಗಿ ಬರುತ್ತಾ ಇದೆ ಅದರ ಫಲವನ್ನು ಬೇರೆ ಕಡೆ ಈ ಮಾದರಿಯನ್ನು ಅನುಸರಿಸಿ ಸಮುದ್ರದ ದಡದಲ್ಲಿ ಇರತಕ್ಕ ಭೂಮಿಗಳಿಗೆ ಅದನ್ನು ಪ್ರಯೋಗ ಮಾಡಿ ಲಾಭ ಮಾಡಬಹುದೇ, ಇದು ಇನ್ನೂ ಹೆಚ್ಚು ಪರೀಕ್ಷೆ ಆಗಿಲ್ಲ. ಅದಕ್ಕೋಸ್ಕರ, ಮಾನ್ಯ ಸದಸ್ಯರಿಗೆ ಹೇಳುವುದು ಏನೆಂದರೆ ನಮ್ಮ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕಳಿಸಿ ಅಲ್ಲಿ ಯಾವ ಯಾವ ಪ್ರಯೋಗ ಮಾಡಿದ್ದಾರೆ ಎಷ್ಟು ಜಯ ಸಿಕ್ಕಿದೆ ಯಾವ ಕೆಲಸ ಮುಂದೆ ಮಾಡಬಹುದು ಎನ್ನುವ ಬಗ್ಗೆ ಪೂರ್ಣ ವಿವರ ತರಿಸಿ ಈ ಸಭೆಗೆ ಕೊಡುವುದಕ್ಕೆ ಸಿದ್ಧ ಇದ್ದೇನೆ.

ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಹತ್ತಿರ ಗ್ರಾನೈಟ್ ಕಲ್ಲುಗಳ ತೆಗೆಯುವಿಕೆ.

134 (1089): ಶ್ರೀ ಮಾಟಾಳ್ ನಾಗರಾಜ್ (ಚಾಮರಾಜನಗರ).–

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?